# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **443** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಶರಣಗೌಡ ಬಯ್ಯಾಪುರ** |
| **ಉತ್ತರಿಸುವ ದಿನಾಂಕ** | : | **12-12-2024** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು.** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಅಂಗಡಿ, ಮನೆಗಳ್ಳತನ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ; | ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಅಂಗಡಿ, ಮನೆಗಳ್ಳತನ ದಾಖಲಾದ ಪ್ರಕರಣಗಳ ಬಗ್ಗೆ ವಿಶೇಷ ಗಮನ ಹರಿಸುವುದಲ್ಲದೆ, ವಿಶೇಷ ಪತ್ತೆದಾರಿ ತಂಡಗಳನ್ನು ರಚಿಸಿ, ಪತ್ತೆ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಕೈಗೊಂಡು ಅರಿವು ಮೂಡಿಸಲಾಗುತ್ತಿದೆ. ದಾಖಲಾಗಿರುವ ಪ್ರಕರಣಗಳು ಈ ಕೆಳಕಂಡತಿದೆ. |

**ಅಂಗಡಿ ಕಳ್ಳತನ ಪ್ರಕರಣ**

| ವರ್ಷ | ದಾಖಲಾದ ಒಟ್ಟು ಪ್ರಕರಣಗಳು | ಪತ್ತೆಯಾದ ಒಟ್ಟು ಪ್ರಕರಣಗಳು | ಬಾಕಿ ಇರುವ ಒಟ್ಟು ಪ್ರಕರಣಗಳು |
|---|---|---|---|
| 2023 | 02 | 01 | 01 |
| 2024 (ನವೆಂಬರ್ 30 ರವರೆಗೆ) | 01 | 01 | 00 |

**ಮನೆಗಳ್ಳತನ ಕಳ್ಳತನ ಪ್ರಕರಣ**

| ವರ್ಷ | ದಾಖಲಾದ ಒಟ್ಟು ಪ್ರಕರಣಗಳು | ಪತ್ತೆಯಾದ ಒಟ್ಟು ಪ್ರಕರಣಗಳು | ಬಾಕಿ ಇರುವ ಒಟ್ಟು ಪ್ರಕರಣಗಳು |
|---|---|---|---|
| 2023 | 08 | 03 | 05 |
| 2024 (ನವೆಂಬರ್ 30 ರವರೆಗೆ) | 22 | 07 | 15 |

- ಲಿಂಗಸೂಗೂರು ತಾಲ್ಲೂಕಿನ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕವಾಗಿ ರಾತ್ರಿ ಮತ್ತು ಹಗಲು ಗಸ್ತುಗಳನ್ನು ಜಾರಿ ಮಾಡಲಾಗುತ್ತಿದೆ.

| | | |
|---|---|---|
| | | ➢ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಅಧಿಕಾರಿಗಳು ಹೆಚ್ಚಿನ ಪೆಟ್ರೋಲಿಂಗ್ ಮಾಡಲಾಗುತ್ತಿದೆ.<br>➢ ನಗರ ಮತ್ತು ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಅಪರಾಧ ಗಳನ್ನು ತಡೆಗಟ್ಟುವ ಸಂಬಂಧ ಸಿ.ಸಿ. ಕ್ಯಾಮರಗಳನ್ನು ಅಳವಡಿಸುವಂತೆ ತಿಳಿಸಿ ಕ್ರಮ ಜರುಗಿಸಲಾಗುತ್ತಿದೆ.<br>➢ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಇರುವ ಎಂಓಬಿ ಜನರನ್ನು ಚೆಕ್ ಮಾಡುವಂತೆ ಬೀಟ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸೂಚಿಸಲಾಗಿದೆ.<br>➢ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿ ಕಾರಾಗೃಹದಿಂದ ಬಂದ ಅಪರಾಧಿಗಳ ಮೇಲೆ ನಿಗಾ ವಹಿಸಲಾಗುತ್ತಿದೆ.<br>➢ ನಗರದಲ್ಲಿ ಸಿಬ್ಬಂದಿಯನ್ನು ಹಗಲು ಗಸ್ತು ಕರ್ತವ್ಯಕ್ಕೆ ನೇಮಿಸಿ ಅವರಿಂದ ಬೀಗ ಹಾಕಿದ ಮನೆಗಳ ಮಾಹಿತಿಯನ್ನು ಸಂಗ್ರಹಿಸಿ. ರಾತ್ರಿ ಗಸ್ತು ಕರ್ತವ್ಯಕ್ಕೆ ತೆರಳುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾಹಿತಿಯನ್ನು ನೀಡಿ ಬೀಗ ಹಾಕಿದ ಮನೆಗಳ ಬಗ್ಗೆ ನಿಗಾ ವಹಿಸುವಂತೆ ಸೂಚಿಸಲಾಗಿದೆ. |
| ಆ | ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಾದ್ಯಂತ ಇತ್ತೀಚಿಗೆ ಜೂಜಾಟ, ಕಿರಾಣಿ ಅಂಗಡಿಗಳಲ್ಲಿ ಮದ್ಯ ದಾಸ್ತಾನು, ಸಂಗ್ರಹ-ಮಾರಾಟ, ಮಟಕಾದಂತ ಕಾನೂನು ಬಾಹಿರ ಚಟುವಟಿಕೆಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮವೇನು? | ಲಿಂಗಸಗೂರು ತಾಲ್ಲೂಕಿನಾದ್ಯಂತ ಇತ್ತೀಚಿಗೆ ಜೂಜಾಟ, ಕಿರಾಣಿ ಅಂಗಡಿಗಳಲ್ಲಿ ಮದ್ಯ ದಾಸ್ತಾನು, ಸಂಗ್ರಹ-ಮಾರಾಟ, ಮಟ್ಕಾದಂತ ಕಾನೂನು ಬಾಹಿರ ಚಟುವಟಿಕೆಗಳು ತಡೆಯಲು ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಹೆಚ್‌ಡಿ 64 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ

| ಕ್ರ.ಸಂ. | ಶೀರ್ಷಿಕೆ | 2023 | | 2024 (ನವಂಬರ್–30ರ ವರೆಗೆ | |
|---|---|---|---|---|---|
| | | ದಾಖಲಾದ ಒಟ್ಟು ಪ್ರಕರಣಗಳು | ಆರೋಪಿತರ ಸಂಖ್ಯೆ | ದಾಖಲಾದ ಒಟ್ಟು ಪ್ರಕರಣಗಳು | ಆರೋಪಿತರ ಸಂಖ್ಯೆ |
| 1 | ಮಟ್ಕಾ | 105 | 169 | 155 | 183 |
| 2 | ಇಸ್ಪೇಟ್ ಜೂಜಾಟ | 89 | 602 | 68 | 383 |
| 3 | ಅಕ್ರಮ ಮದ್ಯ ಮಾರಾಟ | 42 | 48 | 31 | 32 |
| 4 | ಅಕ್ರಮ ಮದ್ಯ ದಾಸ್ತಾನು | 0 | 0 | 0 | 0 |
| ಒಟ್ಟು | | 236 | 819 | 254 | 598 |